*ಜಗದೀಶ ಕಾರಂತ*
*ಹಿಂದು ಜಾಗರಣ ವೇದಿಕೆ.*

### *ಈ ಹಿಂದು ಸಮಾಜೋತ್ಸವಗಳ ಉದ್ದೇಶ ಏನು?*

ರಾಷ್ಟ್ರೀಯ ಸ್ವಯಂಸೇವಕ ಸಂಘದ ಎರಡನೇ ಸರಸಂಘಚಾಲಕ್ ಮಾಧವರಾವ್ ಸದಾಶಿವರಾವ್ ಗೋಳ್ವಲ್ಕರ್ ಅವರ ಜನ್ಮ ಶತಾಬ್ದಿಯನ್ನ ಒಂದು ವಿಶಿಷ್ಠ ರೀತಿಯಲ್ಲಿ ಆಚರಿಸಬೇಕು, ಅನ್ನೋ ಉದ್ದೇಶದಿಂದ, ಶ್ರೀ ಗುರೂಜಿ ಜನ್ಮ ಶತಮಾನೋತ್ಸವ ಸಮಿತಿ ಅನೇಕ ಅರ್ಥಪೂರ್ಣ ವೈವಿಧ್ಯಮಯ ಕಾರ್ಯಕ್ರಮಗಳನ್ನ ಒಂದು ವರ್ಷದಾದ್ಯಂತ ಏರ್ಪಡಿಸುತ್ತಿದೆ. ಗುರೂಜಿಯವರನ್ನ ವೈಭವೀಕರಿಸಬೇಕು ಎನ್ನುವ ಉದ್ದೇಶ ಇಲ್ಲ. ಎಂದೂ ವ್ಯಕ್ತಿ ಪೂಜೆ ಒಪ್ಪದ, ಬದುಕಿದ್ದಾಗ ಕೊರಳಿಗೆ ಹಾರ ಹಾಕುವುದಕ್ಕೂ ಅವಕಾಶ ನೀಡದಿದ್ದ ಗುರೂಜಿಯವರ ವಿಚಾರಗಳಿಗಾಗಿ ತಮ್ಮ ಬದುಕನ್ನ ಮೀಸಲಿಟ್ಟಿದ್ದ, ಅವರ ವಿಚಾರದ ಪ್ರಚಾರಕ್ಕೆ ರಭಸ ನೀಡುವ ಉದ್ದೇಶದಿಂದ ಬೇರೆ ಬೇರೆ ಕಾರ್ಯಕ್ರಮಗಳನ್ನ ಆಯೋಜಿಸಲಾಗಿದೆ. ಹಿಂದುತ್ವ ಭಾರತದ ರಾಷ್ಟ್ರೀಯತೆ, ಹಿಂದುತ್ವ ಭಾರತದ ಆತ್ಮ ಎನ್ನುವ ಪ್ರಖರವಾದ ವಿಚಾರವನ್ನ ಪ್ರತಿಪಾಸಿದ ಮಾಹಾತ್ಮ ಗುರೂಜಿಯವರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಈ ವಿಚಾರಗಳನ್ನೆಲ್ಲ ಹಿಂದೂಗಳಿಗೆ ನೆನಪಿಸುವ ಉದ್ದೇಶದಿಂದ ಈ ಸಮಾಜೋತ್ಸವಗಳನ್ನ ಆಯೋಜಿಸಲಾಗ್ತಿದೆ.

### *ಹಿಂದು ಧರ್ಮದ ವ್ಯಾಪ್ತಿಯೊಳಗೆ ಹಿಂದುತ್ವದ ಅರ್ಥ ಏನು?*

ಆರ್ ಎಸ್ ಎಸ್, ಆಧ್ಯಾತ್ಮಿಕ ಅಥವಾ ಧಾರ್ಮಿಕ ನೆಲೆಯಲ್ಲಿಯೇ ಈ ವಿಚಾರ ಹೇಳ್ತಾ ಇಲ್ಲ. ರಾಷ್ಟ್ರೀಯತೆ, ಟಿಚಿಣುಟಿಚಿಟುಣಥಿ, ನೆಲೆಗಟ್ಟಿನ ಮೇಲೆ ಈ ವಿಚಾರಕ್ಕೆ ಒತ್ತು ಕೊಟ್ಟಿದ್ದೇವೆ. ಆರ್ ಎಸ್ ಎಸ್, ಮತ್ತು ಗುರೂಜಿ, ರಾಷ್ಟ್ರ ಮತ್ತು ಸಮಾಜದ ಹಿನ್ನೆಲೆಯಲ್ಲಿ ಹಿಂದುತ್ವದ ಪ್ರತಿಪಾದನೆಯನ್ನ ಮಾಡಿದ್ರು.

### *ಹಾಗಾದ್ರೆ ಹಿಂದುತ್ವದ ಲಕ್ಷಣಗಳೇನು?*

ಜಗತ್ತಿನಲ್ಲಿ ಉಳಿದಿರುವ ಏಕೈಕ ಸನಾತನ ನಾಗರೀಕತೆ ಅಂತ ಯಾರಾದ್ರೂ ಗುರುತಿಸಬಹುದಾದ್ರೆ, ಅದನ್ನ ಭಾರತದಲ್ಲಿ ಗುರುತಿಸಬಹುದು. ಇಡೀ ಜಗತ್ತಿಗೇ ಒಳ್ಳೆಯದಾಗಲಿ, ಇಡೀ ಜಗತ್ತು, ಯಾವುದೇ ಮತ ಸಂಪ್ರದಾಯಗಳನ್ನೂ ಮೀರಿ ಇಡೀ ಮಾನವ ಕುಲದ, ಮಾತ್ರವಲ್ಲದೇ ಎಲ್ಲಾ ಚರಾಚರಗಳ ಒಳಿತನ್ನು ಪ್ರತಿಪಾದಿಸಿದ ಒಂದು ನಂಬಿಕೆ ಇದು.

### *ಹಿಂದು ಧರ್ಮ ಮತ್ತು ಹಿಂದುತ್ವ ಎನ್ನುವ ಪದಗಳ ಮಧ್ಯೆ ದ್ವಂದ್ವ ಇಲ್ವಾ? ನಿಮ್ಮನ್ನ ಟೀಕಿಸುವ ಕೆಲವರು ಹಿಂದೂ ಧರ್ಮವನ್ನ ಒಪ್ಕೋತೀವಿ ಆದ್ರೆ ಹಿಂದುತ್ವವನ್ನ ಒಪ್ಕೊಳ್ಳೋದಿಲ್ಲ, ಅಂತಾರಲ್ಲ? ಇಲ್ಲ, ಹಿಂದುತ್ವ ಆರ್ ಎಸ್ ಎಸ್‌ನ ಒಂದು ವಿಚಾರನಾ?*

ಆರ್ ಎಸ್ ಎಸ್, ಹೊಸತು ಏನನ್ನೂ ಸೃಷ್ಟಿ ಮಾಡಿಲ್ಲ. ಗುರೂಜಿ, ಡಾ। ಹೆಡಗೇವಾರ್ ಪ್ರತಿಪಾದಿಸಿದ ವಿಚಾರಗಳು ಭಾರತೀಯ ಸಂಸ್ಕೃತಿಯ ನೆಲೆ ಗಟ್ಟಿನಲ್ಲಿಯೇ ವಿಕಾಸವಾದ ವಿಚಾರಗಳು. ಹೊಸತು ಯಾವುದೂ ಇಲ್ಲ. ಎಲ್ಲಾ ವಿಚಾರಗಳು, ಎಲ್ಲಾ ಮತ ಸಂಪ್ರದಾಯಗಳನ್ನ ಗೌರವಿಸುವ ಅದರ ಬಗ್ಗೆ ಶ್ರದ್ಧೆ ತೋರುವವ, ಹಿಂದು. 'ಸರ್ವೇ ಜನಾಃ ಸುಖಿನೋ ಭವಂತುಃ' ಎನ್ನುವುದನ್ನ ಹಿಂದುವಿನೊಳಗೆ ಮಾತ್ರ ಗುರುತಿಸಬಹುದು.

***ಗುರೂಜಿಯವರು ಪ್ರತಿಪಾದಿಸಿದ ಹಿಂದುತ್ವಕ್ಕೂ ಹಿಂದು ರಾಷ್ಟ್ರವಾದಕ್ಕೂ ವೀರ ಸಾವರ್ಕರ್ ಹೇಳಿದ ವಿಚಾರಕ್ಕೂ ವ್ಯತ್ಯಾಸ ಇದೆಯಾ?***

ಇಲ್ಲ. ಏನೂ ವ್ಯತ್ಯಾಸ ಇಲ್ಲ.

***ಹಾಗಾದ್ರೆ, ಗುರೂಜಿಯವರು ಹೇಳಿದ್ದೇನು?***

ಗುರೂಜಿಯವರು ಹೊಸತನ್ನೇನೂ ಹೇಳಲಿಲ್ಲ. ವಿವೇಕಾನಂದರು ಹೇಳಿದ್ದನ್ನು, ಹೇಳಿದ್ರು. ತಿಲಕರು ಹೇಳಿದ್ದನ್ನ, ಹೇಳಿದರು. ಸುಭಾಷ್ ಚಂದ್ರ ಬೋಸ್ ಹೇಳಿದ್ದನ್ನ, ಹೇಳಿದ್ರು. ವಿದ್ಯಾರಣ್ಯ, ಹಕ್ಕ ಬುಕ್ಕ, ಸಮರ್ಥ ರಾಮ ದಾಸ್ ಹೇಳಿದ್ದನ್ನ, ಹೇಳಿದರು.

***ಆದ್ರೆ, ಇದೆಲ್ಲ ಗುರೂಜಿಯವರದೇ ವಿಚಾರ ಅನ್ನೋ ರೀತಿಯಲ್ಲಿ ಹೇಳ್ತಾ ಇದ್ದೀರಲ್ಲ?***

ಈ ಸಂಘಟನೆಯನ್ನು ಶುರು ಮಾಡಿದ ಮೇಲೆ ಈ ಸಂಘಟನೆಗೆ ಸಂಬಂಧ ಪಟ್ಟ ಹಾಗೆ ಗುರೂಜಿಯವರು ಆ ವಿಚಾರಗಳನ್ನ ಹೇಳಿದ್ರು. ಗುರೂಜಿಯವರ ವ್ಯಾಖ್ಯಾನದ ಆಧಾರದಲ್ಲಿ ಅವರ ವಿಚಾರ ಅಂತ ಗುರುತಿಸಬಹುದು. ಆದ್ರೆ ಗುರೂಜಿಯವರು ಪ್ರವಾದಿಯ ಸ್ಥಾನದಲ್ಲಿ ನಿಂತು ಈ ವಿಚಾರಗಳನ್ನ ಹೇಳಿದ್ರು ಅಂತಲ್ಲ. ಈ ಎಲ್ಲ ವಿಚಾರಗಳನ್ನ ಸಂಘಟನೆಯ ಮೂಲಕ ಪ್ರತಿಪಾದಿಸಿ ಜಾರಿಗೆ ತರಲು ಚಾಲನೆ ನೀಡಿದ್ದೇ ಅವರ ವಿಚಾರ.

***ಆದ್ರೆ ಗುರೂಜಿಯವರ ವಿಚಾರಗಳಲ್ಲಿ ಪರಧರ್ಮ ಸಹಿಷ್ಣುತೆ ಇದ್ರೂ, ಅದು ಎಲ್ಲೂ ಸ್ಪಷ್ಟವಾಗಿ ಕಾಣೋದಿಲ್ಲ ಅಂತಾರಲ್ಲಾ?***

ಅದು, ಓದದೇ ಇದ್ದೋರಿಗೆ ಹಾಗೆ ಕಾಣಬಹುದು.

***ಹಿಂದುವಿಗೆ ಮಾತ್ರ ಭಾರತದಲ್ಲಿ ಸ್ಥಾನ ಅನ್ನೋ ರೀತಿಯಲ್ಲೇ ಅವರ ವಿಚಾರ ವ್ಯಕ್ತ ವಾಗಿದೆ, ಅಂತ?***

ಸುಳ್ಳು.

***ಗುರೂಜಿಯವರ ವಿಚಾರದಲ್ಲಿ ಪರಧರ್ಮ ಸಹಿಷ್ಣುತೆ ಇದೇಂತ ಆಗಿದ್ರೆ, ಹಿಂದು ಮತ್ತು ಪರಧರ್ಮಗಳ ಮಧ್ಯೆ ಸಂಘರ್ಷ ನಡೆದಾಗಲೆಲ್ಲ ಆರ್ ಎಸ್ ಎಸ್ ಯಾಕಲ್ಲಿ ಮುಂಚೂಣಿಯಲ್ಲಿರ್‍ತದೆ?***

ಗುರೂಜಿಯವರು ಸ್ಪಷ್ಟವಾಗಿ ಹೇಳಿರುವಂಥಾದ್ದು ಏನಂದ್ರೆ, ‘ ‘ಹಿಂದು‘, ಮಾತ್ರ ಧರ್ಮ ಇತರೆ ಎಲ್ಲವೂ ಮತ ಸಂಪ್ರದಾಯಗಳು‘, ಅಂತ.

***ಇವತ್ತು ‘ಹಿಂದು‘ ಎಂದು ಕರೆಯಲ್ಪಡುವ ಸಮಾಜದಲ್ಲಿರುವ ಕೆಳವರ್ಗದ ಅಥವಾ ಕಟ್ಟಕಡೆಯ ವ್ಯಕ್ತಿಗೆ, ಧರ್ಮ ತಲುಪಲು ಸಾಧ್ಯವಾಗಿಲ್ಲ. ಆ ಕೆಲಸವನ್ನು ಹಿಂದು ಸಮಾಜೋತ್ಸವವೂ ಮಾಡ್ಲಿಕ್ಕಾಗಿಲ್ಲ. ಇವತ್ತೂ ಕೂಡ ಧರ್ಮ, ಪುಸ್ತಕಗಳಲ್ಲಿ, ಮಠಗಳಲ್ಲಿ ಮತ್ತು ಸ್ವಾಮೀಜಿಗಳ ಭಾಷಣಗಳಲ್ಲಿ ಮಾತ್ರ ಇದೆ, ಅಂತ?***

ನಿನ್ನೆಯವರೆಗೆ ನೀವು ಹೇಳೋದು ಸರಿ, ಆದ್ರೆ ಇವತ್ತು ಹಾಗಿಲ್ಲ. ದಶಕಗಳ ಹಿಂದಿನ ವಿಷಯಗಳನ್ನು ಎಲ್ಲಿಯವರೆಗೆ ಹೇಳ್ಕೊಂಡಿರ್‍ತೀರ ನೀವು? ಹಿಂದೆ ವಂಚನೆ ಆಗಿತ್ತು ಅನ್ನೋದನ್ನ ನಾವು ಬೇಷರತ್ ಒಪ್ಕೋತೀವಿ. ಈಗ ಅದೇ ನಡೀತಾ ಇದೆ ಅನ್ನೋದು, ಸುಳ್ಳು. ಇವತ್ತು ಹಿಂದೂ ಸಮಾಜೋತ್ಸವದ ಹೆಸರಿನಲ್ಲಿ ಅಂತ ಅಲ್ಲ, ಆರ್ ಎಸ್ ಎಸ್ ಎಲ್ಲೆಲ್ಲಿ ಯಾವ್ಯಾವ ಊರುಗಳಿಗೆ ಪ್ರವೇಶಿಸಿದೆ ಅಲ್ಲೆಲ್ಲಾ ಜಾತೀಯ ಸಾಮರಸ್ಯವನ್ನ ಮತ್ತು ಅಸ್ಪೃಶ್ಯತೆಯ ವಿರುದ್ಧ ಭಾವನೆಯನ್ನ ಮೂಡಿಸುವಲ್ಲಿ ಅದು ಸಫಲವಾಗಿದೆ. ಸೊನ್ನೆಯಿಂದ ಲಕ್ಷಕ್ಕೆ ಬಂದಿದ್ದೇವೆ, ಲಕ್ಷದಿಂದ ಕೋಟಿಗೆ ಹೋಗ್ತೀವಿ.

***ಆರ್ ಎಸ್ ಎಸ್‌ನ ಆರಂಭದಲ್ಲಿ ಹಿಂದೂಗಳ ಸಂಘಟನೆ ಅದರ ಮೂಲ ಉದ್ದೇಶವಾಗಿತ್ತಾದ್ರೂ, ಬ್ರಾಹ್ಮಣಿಕೆಯ, ಅಥವಾ ವೈದಿಕ ಹಿಂದೂ ಧರ್ಮ ವಿಚಾರಗಳನ್ನ ಎತ್ತಿ ಹಿಡಿಯುವುದೇ ಆರ್ ಎಸ್ ಎಸ್ ನ ಕೆಲಸವಾಗಿ ಕಂಡು ಬಂದಿತ್ತು. ಎಂಬತ್ತರ ದಶಕದಲ್ಲಿ ಮಾತ್ರ ಅಸ್ಪೃಶ್ಯತೆಯ ವಿರುದ್ಧ ನೇರ ಹೋರಾಟವನ್ನು ಆರಂಭಿಸಿದ್ರಿ. ಆರ್ ಎಸ್ ಎಸ್‌ಗೆ ಸಾಮೂಹಿಕವಾಗಿ ಬೆಂಬಲ ಸಿಗದ ಪರಿಸ್ಥಿತಿ ನಿರ್ಮಾಣವಾದಾಗ ಮಾತ್ರ ಅಸ್ಪೃಷ್ಯತೆಯ ಕಡೆ ಗಮನ ಹರಿಸಿದ್ರಿ, ಅಂತ?***

ಮಾವಿನ ಗಿಡ ನೆಟ್ಟ ತಕ್ಷಣ ಫಲ ಬರಬೇಕು ಅಂತ ಹೇಳೋದು ಮೂರ್ಖತನ. ಆರ್ ಎಸ್ ಎಸ್ ಹೈಬ್ರಿಡ್ ತಳಿ ಅಲ್ಲ. ಅರವತ್ತ ನಾಲ್ಕನೇ ಇಸವಿಯಲ್ಲಿ ಗುರೂಜಿಯವರು ಕೆಲವು ಧಾರ್ಮಿಕ ಮುಖಂಡರೊಂದಿಗೆ ಸೇರಿ ವಿಶ್ವ ಹಿಂದು ಪರಿಷದ್ ಅನ್ನು ಸ್ಥಾಪಿಸಿದರು. ಹಿಂದೂ ಸಮಾಜದ ಒಳಗಿನ ದೋಷಗಳನ್ನ ಸರಿಪಡಿಸುವುದೇ ಆ ಸಂಘಟನೆಯ ಉದ್ದೇಶವಾಗಿತ್ತು.

***ಹಿಂದೂಗಳಲ್ಲಿ, ಎಲ್ಲಾ ಜಾತಿ ಪಂಗಡಗಳೆಲ್ಲ ಸಮನಾಗಿ ವ್ಯವಹರಿಸುವ ಸಮಾಜ ನಿರ್ಮಾಣವಾಗುವವರೆಗೆ ಹಿಂದೂಗಳ ಒಗ್ಗಟ್ಟು ಆಗೋದಿಲ್ಲ ಅಂತ, ಅಷ್ಟು ತಡವಾಗಿ ಅರಿವಾಗ ಬೇಕಿತ್ತಾ?***

ಪ್ರಾರಂಭದಿಂದಲೇ ಎಲ್ಲಾ ಜಾತಿ, ಭಾಷೆ, ಪಂಥ, ಪಂಗಡಗಳ ವಲಯಗಳಲ್ಲಿಯೇ ಕೆಲಸ ಆರಂಭವಾಗಿತ್ತು. ಕಣ್ಣಿಗೆ ಕಾಣಿಸ್ಲಿಕ್ಕೆ ಶುರುವಾಗಿದ್ದು ಅರವತ್ತರ ದಶಕದಲ್ಲಿ.

***ಇವತ್ತಿಗೂ ಆರ್ ಎಸ್ ಎಸ್ ನ ಅಡಿಯಲ್ಲಿ ಅಥವಾ ಆರ್ ಎಸ್ ಎಸ್ ಗೆ ಸಂಬಂಧಪಟ್ಟ ಅನೇಕ ಸಂಘಟನೆಗಳಿವೆ, ಚಟುವಟಿಕೆಗಳಿವೆ.***
***ಆದ್ರೆ ನೇರವಾಗಿ ಅಸ್ಪೃಶ್ಯತೆಯ ನಿರ್ಮೂಲನೆಗೆಂದೇ ಮೀಸಲಾಗಿರುವ ಯಾವುದೇ ಅಂಗ ಇಲ್ಲ, ಅಂತ ಆರೋಪ ಇದಿಯಲ್ಲಾ? ಅಸ್ಪೃಶ್ಯತೆ ಮತ್ತು ಈ ಜಾತಿ ಪಿಡುಗು ನಿಮಗೆ ಅಷ್ಟು ಪ್ರಮುಖ ವಿಚಾರ ಅಲ್ವಾ?***

ಪ್ರತ್ಯೇಕವಾಗಿ ಒಂದು ಸಂಘಟನೆಯನ್ನ ಅಥವಾ ಶಿಬಿರ ಕಟ್ಟಿ ಆ ಕೆಲಸ ಮಾಡಬೇಕು ಅನ್ನೋ ಕಲ್ಪನೆ ನಮ್ಮದಲ್ಲ. ನಮ್ಮ ಕಲ್ಪನೆ ಏನಂದ್ರೆ ಇಡೀ ಸಮಾಜದೊಂದಿಗೇ ಕೆಲಸ ಮಾಡಬೇಕು ಅನ್ನೋದು.

***ನೀವು ಅಸ್ಪೃಶ್ಯತೆಯನ್ನ ಒಂದು ಪ್ರಮುಖ ವಿಷಯವನ್ನಾಗಿ ಮಾತಾಡೋದಿಲ್ಲ, ಅಂತಾರಲ್ಲ?***

ಆರ್ ಎಸ್ ಎಸ್ ಶಾಖೆಗಳು ನಡೆಯೋದೇ ಬಯಲಿನಲ್ಲಿ. ಎಲ್ಲಾ ಜಾತಿಯವರೂ ಸೇರಿ ಸಮಾನರಾಗಿ, ಸಮ್ಮಿಳಿತರಾಗಿ ಚಟುವಟಿಕೆಗಳಲ್ಲಿ ಭಾಗವಹಿಸ್ತಾರೆ.

***ನೀವು ಹಿಂದೂ ಸಮಾಜೋತ್ಸವವನ್ನ ಮಾಡ್ದಾಗ ಅಲ್ಲೂ ಮೇಲೂ ಕೀಳೂ ಅಂತ ಇರ್ತದೆ. ಎಲ್ಲೋ ಕೆಲವು ದಲಿತ ನಾಯಕರನ್ನ ಮತ್ತು ಕೆಳವರ್ಗದವರನ್ನ ತಂದು ವೇದಿಕೆ ಮೇಲೆ ಕೂರಿಸ್ತೀರ. ಆದ್ರೂ ಅಲ್ಲೂ ದೊಡ್ಡವರು ಸಣ್ಣವರು ಅನ್ನೋದು ಎದ್ದು ಕಾಣ್ತದೆ, ಅಂತ? ಅದರ ಬದಲು ಸಮಾಜದೊಳಗೇ ಕೆಲಸ ಮಾಡಬಹುದಲ್ಲಾಂತ?***

ಸಮಾಜೋತ್ಸವದಿಂದಾಗಿ ಆಗಿರುವಂತಹ ಅದ್ಭುತವಾದ ಪರಿವರ್ತನೆ, ನಿಮಗ್ಯಾರಿಗೆ, ಅಂದ್ರೆ ದೂಷಿಸುವವರಿಗೆ, ಅಥವಾ ದೂರದಿಂದ ನಿಂತು ನೋಡುವವರಿಗೆ ಅರ್ಥವಾಗೋದಿಲ್ಲ. ಪಾದ ಯಾತ್ರೆಗಳ ಸಂದರ್ಭದಲ್ಲಿ ಅಸ್ಪೃಷ್ಯರು ಅಥವಾ ಕಡೆಗಣಿಸಲ್ಪಟ್ಟವರು ಅಂಥ ಯಾರ ಬಗ್ಗೆ ಭಾವನೆ ಇದಿಯೋ ಅವರಿಗಾಗಿರುವ ಅನುಭವಗಳು, ಉಂಟಾಗಿರುವ ಅನಿಸಿಕೆಗಳ ಮೂಲಕ ಅವರಿಗೆ ನಮ್ಮ ಪ್ರಯತ್ನದ ಅರಿವಾಗಿದೆ, ಮತ್ತು ವೇದಿಕೆಯಲ್ಲಿ ತಾರತಮ್ಯದ ಬಗ್ಗೆ ಮಾತಾಡೋದೆಲ್ಲ ಕಪೋಲ ಕಲ್ಪಿತ. ಕೆಲವರಿಗೆ, ಆಗುತ್ತಿರುವ ಪರಿವರ್ತನೆ ನೋಡಿ ಸಹಿಸ್ಲಿಕ್ಕಾಗ್ತಾ ಇಲ್ಲ.

***ಹಿಂದೂ ಸಮಾಜೋತ್ಸವದಲ್ಲಿ ಮೆರವಣಿಗೆ ಮಾಡ್ತೀರ, 'ಹಿಂದು, ನಾವೆಲ್ಲ ಒಂದು' ಅಂತೀರ, ಆದ್ರೆ ಸಮಾಜೋತ್ಸವ ಮುಗಿದ ಮೇಲೆ ನೋಡಿದ್ರೆ ಕೆಳ ಜಾತಿಯವರು ಪುನಃ ಮೇಲ್ಜಾತಿಯವರ ಮನೆ ಹೊರಗೇ ನಿಲ್ಬೇಕಾಗ್ತದೆಯಲ್ಲಾ, ಅಂತ? ಮೇಲ್ವರ್ಗದವರ ಮನೆಯ ಹೊರಗೆ ಮಾತ್ರ ಈ ಸಮಾಜೋತ್ಸವದ ಪ್ರಭಾವ ಇದೆ, ಒಳಗೆ, ಆಗಿಲ್ಲ, ಅಂತ?***

ನಮ್ಮ ಸಂಘಟನೆಯೊಳಗದಿಲ್ಲ. ಈ ಕೆಲಸದೊಳಗೆ ಯಾರು ತೊಡಗಿದ್ದಾರ್ರೆ ಅವರ ಬಗ್ಗೆ ದೂರದಲ್ಲಿ ನಿಂತು ಟೀಕೆ ಮಾಡೋದು ಸರಿಯಲ್ಲ. ಮಾಡ್ಬೇಡಿ. ಸ್ವಯಂಸೇವಕ, ಸಂಘ. . .

***ಸ್ವಯಂಸೇವಕರು, ಅಥವ ಸಂಘ ಭೇಧ ಭಾವ ಮಾಡೋದಿಲ್ಲವಾದ್ರೂ ನೀವು ಕೆಲಸ ಮಾಡುತ್ತಿರುವ ಸಮಾಜದಲ್ಲಿ ಸ್ವಲ್ಪ ಮೇಲೆ ಮೇಲೆ ಮಾತ್ರ ಬದಲಾವಣೆಗಳಾಗಿವೆಯಾದ್ರೂ, ಅಂತರಾಳದಲ್ಲಿ ಆಗಿಲ್ಲ, ಅಂತ? ಇವತ್ತು, ಇಷ್ಟೊಂದು ವರ್ಷಗಳ ನಂತರ, ನಿಮ್ಮ ವಿಚಾರಗಳ ಆಧಾರದ ಮೇಲೆ ಸರ್ಕಾರಗಳು ಅಸ್ತಿತ್ವಕ್ಕೆ ಬಂದಿರುವ ಸಂದರ್ಭದಲ್ಲೂ, ನೀವು ಮಾತನಾಡುತ್ತಿರುವ ಬದಲಾವಣೆಗಳು ಬರೀ ಕಣ್ಣಿಗೆ ಕಾಣುವ ಥಳಕು ಮಾತ್ರನಾ?***

ಹಾಗೇನಿಲ್ಲ. ಸಮಾಜೋತ್ಸವದಲ್ಲಿ ಎಲ್ಲಾ ವರ್ಗಗಳ ಜನರು ಬಂದು ಒಂದೇ ಕುಟುಂಬದವರಂತೆ ಭಾಗವಹಿಸ್ತಾ ಇದ್ದಾರೆ. ಈ ಉಚ್ಚ ನೀಚ ಅನ್ನೋದು ಹಳೆಯ ಒಂದು ಆರೋಪ, ಅಷ್ಟೆ

***ಈ ಸಮಾಜೋತ್ಸವದಲ್ಲಿ ಒಗ್ಗೂಡುವಿಕೆ ಬರೀ ತಾತ್ಕಾಲಿಕ, ಸಂಘದ ಸೂರಿನ ಕೆಳಗೆ ನಾವೆಲ್ಲ ಒಂದು ಅನ್ನೋ ತೋರ್ಪಡಿಕೆಗಾಗಿ ಮಾತ್ರ ಎಲ್ಲಾ ಒಟ್ಟಾಗಿ ಬರ್ತಾರೆ, ಸಮಾಜೋತ್ಸವದಲ್ಲಿ ಮಾತ್ರ ಮೇಲು ಕೀಳು ಇರ್ಲಿಕ್ಕಿಲ್ಲ, ಮತ್ತೆ ಆನಂತರ ಎಲ್ಲಾ ಯಥಾ ಸ್ಥಿತಿಯಲ್ಲಿ ಮುಂದುವರೀತದೆ, ಅಂತ?***

ಅದು ನಿಮ್ಮ ಕಲ್ಪನೆ. ಜಾತೀಯತೆಯ ಗಂಡಾಂತರದ ಬಿಸಿ ಜನರಿಗೆ ಮುಟ್ಟಿದೆ. ವಿಷಯ ಮಂಡನೆ ಮಾಡುವಾಗ ನಾವು ಇದನ್ನೇ ಹೇಳ್ತೀವಿ 'ಕಾಶ್ಮೀರದ ಹಿಂದುಗಳು ಬ್ರಾಹ್ಮಣ್, ಬನಿಯಾ, ರಾಜ್‌ಪೂತ್, ಮಹಾರ್ ಅಂತ ಒದ್ದಾಟ್ತಾ ಮೂವತ್ತು ವರ್ಷದ ಹಿಂದೆ ಮಾಡಿದ ತಪ್ಪಿನಿಂದಾಗಿ ಅವರು ಇವತ್ತು ಅನುಭವಿಸ್ತಾ ಇದ್ದಾರೆ. ಹಾಗಾಗಿ, ಆ ತಪ್ಪುಗಳನ್ನ ನೀವು ಮಾಡಿ, ಅನುಭವಿಸ ಬೇಡಿ', ಅಂತ ಹೇಳ್ತೀವಿ. 'ಮೊದಲು ಸಮಾಜ ಉಳೀಬೇಕು,

ಹಿಂದುತ್ವ ಉಳೀ ಬೇಕು, ದೇಶ ಉಳೀಬೇಕು. ದೇಶ, ಸಮಾಜ ಎರಡೂ ಸತ್ತರೆ, ನಿಮ್ಮ ಜಾತಿ ಉಳಿಯೋದಿಲ್ಲ, ಅಂತ ಹೇಳ್ತೀವಿ.

*ಇವತ್ತು ದಲಿತರ ದೇವಸ್ಥಾನ ಪ್ರವೇಶ ವಿಚಾರದಲ್ಲೇ ಆಗ್ಲಿ, ಅಥವಾ ದಲಿತರ ಬಹಿಷ್ಕಾರ ವಿಚಾರದಲ್ಲೇ ಆಗ್ಲಿ, ನೀವು ಮೇಲ್ವರ್ಗದವರ ಕೆಂಗಣ್ಣಿಗೆ ಗುರಿಯಾಗೋ ಅಳುಕಿನಿಂದ, ಅಂತಹ ವಿಚಾರಗಳಿಗೆ ತಲೆ ಹಾಕೋದಿಲ್ಲ, ಅಂತಾರಲ್ಲ?*

ಕತ್ತಲೆಯಲ್ಲಿ ಕಂದಾಚಾರ ಇರುತ್ತದೆ. ಆರ್ ಎಸ್ ಎಸ್ ಬೆಳಕು. ಆರ್ ಎಸ್ ಎಸ್ ಇರುವಲ್ಲಿ ಅದಾಗ್ಲಿಕ್ಕೆ ಅವಕಾಶ ಇಲ್ಲ. ಅದನ್ನೆಲ್ಲ ಸಂಘರ್ಷದ ಮೂಲಕ ಅಲ್ಲ, ಸಾಮರಸ್ಯದ ಮೂಲಕ ಬಗೆ ಹರಿಸ್ಲಿಕ್ಕೆ ಪ್ರಯತ್ನಿಸ್ತೇವೆ. ಅದರಿಂದಲೇ ನಮಗೆ ಜನ ಬೆಂಬಲ ಸಿಗ್ತಾ ಇದೆ.

*ಇವತ್ತು ಆರ್ ಎಸ್ ಎಸ್ ದೇಶದ ಮೂಲೆ ಮೂಲೆಗೂ ತಲುಪಿದೆ ಎನ್ನುವುದು ಸತ್ಯವಾಗಿದ್ದೂ ಇಂತಹ ಕಂದಾಚಾರಗಳು ಧರ್ಮದೊಳಗೆ ನಡೀತಿರೋದನ್ನ ನೋಡಿದ್ರೆ, ಆರ್ ಎಸ್ ಎಸ್ ಗೆ ಬದಲಾವಣೆ ಉಂಟು ಮಾಡುವ ಶಕ್ತಿ ಕಡಿಮೆ, ಅಂತ ಹೇಳ್ತೀರ?*

ಈಗ ಒಂದು ಹಂತಕ್ಕೆ ಬಂದಿದ್ದೇವೆ. ಸಂಪೂರ್ಣ ಬದಲಾವಣೆ ಬಹಳಷ್ಟು ಕಷ್ಟ ಅಂತೇನೂ ಅಲ್ಲ.

*ಆರ್ ಎಸ್ ಎಸ್ ಮತ್ತು ಸಂಬಂಧಪಟ್ಟ ಸಂಘಟನೆಗಳನ್ನ, ಅಲ್ಪಸಂಖ್ಯಾತ ವಿರೋಧಿ ಸಂಘಟನೆಗಳು ಅಂತ ಕೆಲವರು ಕರೀತಾರಲ್ಲ?*

ಅವ್ರನ್ನ ಕೇಳಬೇಕು ನೀವು, ಯಾಕೆ ಹಾಗೆ ಕರೀತಾರೆ, ಅಂತ.

*ಅದಕ್ಕೆ ಕಾರಣ ಇರಬಹುದಾ?*

ಯಾರು ಹಾಗೆ ಹೇಳ್ತಾರಲ್ಲ, ಅವರು ಉತ್ತರ ಕೊಡ್ಲಿ, ನಾನ್ಯಾಕೆ ಉತ್ತರ ಕೊಡ್ಲಿ, ಅದಕ್ಕೆ?

*ಆರ್ ಎಸ್ ಎಸ್‌ನವರು ಎಲ್ಲಾ ಮುಸಲ್ಮಾನರನ್ನೂ ಉಗ್ರವಾದಿಗಳು, ಆತಂಕವಾದಿಗಳು ಅನ್ನೋ ರೀತಿಯಲ್ಲಿ ನೋಡ್ತಾರೆ. ಕ್ರೈಸ್ತರೆಲ್ಲ ಮತಾಂತರ ಮಾಡುವವರು ಅನ್ನೋ ರೀತಿಯಲ್ಲಿ ಸಾರ್ವಜನಿಕರಲ್ಲಿ ಭಾವನೆ ಮೂಡಿಸಿ ಬಿಟ್ಟಿದ್ದಾರೆ, ಅಂತಾರಲ್ಲ?*

ಸತ್ಯವನ್ನ ಹೇಳುವುದನ್ನ ನೀವು ಏನು ಏನು ಬೇಕಾದ್ರೂ ಕರೆಯಬಹುದು. ನಾವು ಪರಮತವನ್ನ ದ್ವೇಷಿಸ್ತೀವಿ ಅಂತ ಹೇಳುವವರು ಹಿಂದೂ ಧರ್ಮವನ್ನ ಅರ್ಥಮಾಡಿಕೊಂಡಿಲ್ಲ, ಮತ್ತು ಅವರಿಗೆ ಇಸ್ಲಾಂ, ಅಥವ ಕ್ರೈಸ್ತ ಧರ್ಮಗಳ ಬಗ್ಗೆ ಗೊತ್ತೇ ಇಲ್ಲ. ಒಂದು ಸಾರಿ ಇಸ್ಲಾಂ ಮತ್ತು ಕ್ರಿಸ್ಚಿಯನ್ ಮತ ಸಂಪ್ರದಾಯಗಳನ್ನ ನೋಡ್ಲಿ. ಹುಟ್ಟಿನಿಂದ ಅವು ಬೆಳೆದು ಬಂದದ್ದು ಹೇಗೆ ಅಂತ ನೋಡ್ಲಿ. ನಮ್ಮದನ್ನು ತುಲನೆ ಮಾಡ್ಲಿ. ಪರಮತದ ದ್ವೇಷದ ಆಧಾರದ ಮೇಲೆಯೇ ಇಸ್ಲಾಂ ನಿಂತಿದೆ ಅಂತ ಎಷ್ಟು ಜನರಿಗೆ ಗೊತ್ತಿದೆ? ಕ್ರಿಸ್ಚಿಯನ್ ಧರ್ಮ ಹೋದಲ್ಲೆಲ್ಲಾ ಅಲ್ಲಿಯ ಸಂಸ್ಕೃತಿಯನ್ನ ನಾಶ ಮಾಡಿ, ಅಲ್ಲಿಯ ಜನಾಂಗವನ್ನ ಕೊಂದು, ಬೆಳೆದಿದೆ. ಅದಕ್ಕೆಲ್ಲಾ ಬೇರೆ ಸಾಕ್ಷಿ ಬೇಕೆ?

***ಪ್ರತಿಯೊಬ್ಬ ಮುಸಲ್ಮಾನ ಮತ್ತು ಕ್ರೈಸ್ತನೂ ಆ ರೀತಿಯೇ ಚಿಂತನೆ ಮಾಡ್ತಾನೆ ಅಂತ್ಲಾ?***

ಇಸ್ಲಾಂ, ಕ್ರಿಸ್ಚಿಯಾನಿಟಿ ಬಗ್ಗೆ ಹೇಳ್ತಾ ಇದ್ದೀನಿ, ಮುಸಲ್ಮಾನ ಮತ್ತು ಕ್ರೈಸ್ತರ ಬಗ್ಗೆ ಅಲ್ಲ.

***ಮುಸಲ್ಮಾನ ಅಂದ್ರೆ, ಇಸ್ಲಾಂ ಅನ್ನ ಒಪ್ಕೊಂಡಿರತಕ್ಕಂತವನು ಅಂತ ಅಲ್ವಾ?***

ಹೌದು. ಅಲ್ಲಿ ಮುಗಿದು ಹೋಯ್ತು. ಪರಮತ ಸಹಿಷ್ಣುತೆ ಇಲ್ಲಾಂತ್ಲೇ ಆಯ್ತಲ್ಲಾ? ಇಸ್ಲಾಂನಲ್ಲಿ ಪರಮತದ ಸಹಿಷ್ಣುತೆ ಇಲ್ಲವೇ ಇಲ್ಲ ಅಂತ ಹೇಳಿದ್ಮೇಲೆ, ಅಲ್ಲಿ ಮುಗ್ಧರಿದ್ದಾರೋ, ಟಿಜಜಡಿಚಿಣಜ ಗಳಿದ್ದಾರೋ, ದಡ್ಡರಿದ್ದಾರೋ, ನನಗೆ ಗೊತ್ತಿಲ್ಲ. ಇಸ್ಲಾಂ ಪರಮತವನ್ನು ದೂಷಿಸುವುದನ್ನೇ ಕಲಿಸುತ್ತದೆ. ಹಿಂದೂ ಸಮಾಜೋತ್ಸವದ ಮೂಲಕ ನಾವು ಮತಾಂತರವನ್ನ ತಡೀತಿವಿ, ಭಯೋತ್ಪಾದನೆಯನ್ನ ತಡೀತೀವಿ ಅಂತ ನಾವು ಎಲ್ಲೂ ಹೇಳೇ ಇಲ್ಲ.

***ಹಿಂದೂ ಸಮಾಜೋತ್ಸವಗಳಲ್ಲಿ ಪ್ರಚೋದನಕಾರಿ, ಭಾಷಣಗಳನ್ನ ಮಾಡ್ಲಾಗ್ತದೆ, ಭಯೋತ್ಪಾದನೆ, ಅಥವ ಮತಾಂತರ ಅಂತ ನೀವು ಹೇಳಿದ್ರೂ, ಅದನ್ನ ಸಾಮಾನ್ಯ ಜನರು ಬೇರೆಯೇ ರೀತಿಯಲ್ಲಿ ಅರ್ಥೈಸಿ ಕೊಳ್ತಾರೆ, ಅಂತ?***

ಆರ್ ಎಸ್ ಎಸ್ ಕಳೆದ ಎಂಬತ್ತು ವರ್ಷಗಳಿಂದ ಏನು ಹೇಳ್ತಾ ಇತ್ತು, ಅದೀಗ ಸತ್ಯವಾಗಿ ಜನರಿಗೆ ಗೋಚರಿಸ್ತಾ ಇದೆ. ಜನ ನಮ್ಮ ವಿಚಾರಗಳನ್ನ ಸರಿಯಾದ ರೀತಿಯಲ್ಲೇ ಗ್ರಹಿಸಿದ್ದಾರೆ. ಇವತ್ತು ಜಗತ್ತಿನ ಆಕ್ರಮಣಕಾರೀ ಶಕ್ತಿಗಳ ವಿರುದ್ಧ ಸಮಾಜ ಜಾಗೃತವಾಗಬೇಕಿದೆ.

***ಹಿಂದು ಸಮಾಜೋತ್ಸವಕ್ಕೆ ದುಡ್ಡು ಎಲ್ಲಿಂದ ಬರ್ತಾ ಇದೆ?***

ಜನ

*ನಿಮಗೂ ಅಮೆರಿಕಾದಿಂದ ಹಣ ಬರ್ತಾ ಇಲ್ವಾ?*

ಇಲ್ಲ.

*ಕ್ರೈಸ್ತ ರಾಷ್ಟ್ರಗಳಲ್ಲಿ ಎನ್ ಆರ್ ಐ ಗಳು ಸಂಪಾದಿಸಿದ ದುಡ್ಡು ಬರ್ತಾ ಇಲ್ವಾ?*

ಎನ್ ಆರ್ ಐಗಳು ನಿಶ್ಚಿತವಾದ ಸೇವಾ ಯೋಜನೆಗಳಿಗೆ ತಮ್ಮ ಬೆವರು ಸುರಿಸಿ ದುಡಿದ ಹಣವನ್ನು ಕಳಿಸಿಕೊಡ್ತಾರೆ. ಲೂಟಿ ಮಾಡಿದ ದುಡ್ಡನ್ನಲ್ಲ.

*ಅಂಬೇಡ್ಕರ್‌ರವರ ಚಿತ್ರವನ್ನ, ಅಂಬೇಡ್ಕರ್‌ರವರು ಏನೋ ಹಿಂದುತ್ವದ ಪ್ರತಿಪಾದಕರು ಅನ್ನೋ ರೀತಿಯಲ್ಲಿ ಬಳಸ್ತಾ ಇದ್ದೀರಲ್ಲ?*

ಇಲ್ಲ. ಅವರು ಸಮಾಜಸುಧಾರಕರು, ಅದಕ್ಕಾಗಿ ಬಳಸ್ತೀವಿ.

*ಹಿಂದೂ ಸಮಾಜ ಸುಧಾರಕರು, ಅಂತ್ಲಾ?*

ಆರಂಭದಲ್ಲೇ ಹೇಳಿದ ಹಾಗೆ, ಇದನ್ನೆಲ್ಲಾ ನಾವು, ಧರ್ಮವನ್ನ ಮತ್ತು ಹಿಂದುತ್ವವನ್ನ, ಸಮಾಜದ ನೆಲೆಗಟ್ಟಿನಲ್ಲಿ ನೋಡ್ತೇವೆ. ರಾಷ್ಟ್ರ, ಸಮಾಜದ ಹಿನ್ನೆಲೆಯಲ್ಲಿ, ಅಂಬೇಡ್ಕರ್‌ರವರ ಕೊಡುಗೆ ಅಪಾರವಾದದ್ದು.

*ಆದ್ರೆ, ಅಂಬೇಡ್ಕರ್ ರವರು ಹಿಂದೂ ಧರ್ಮದ ವಿರೋಧಿಯಾಗಿದ್ರು, ಅಂತ ಅವರ ಸಮರ್ಥಕರು ಹೇಳ್ತಾರಲ್ಲ?*

ಅಂದಿನ ಸನ್ನಿವೇಶದಲ್ಲಿ ಅಂಬೇಡ್ಕರ್ ಅವರಿಗೆ ಹಾಗೆ ಅನ್ನಿಸಿದ್ದು, ಸತ್ಯ. ಹಿಂದೆ, ಆ ಸನ್ನಿವೇಶದಿಂದಾಗಿ ಸಮಾಜದ ವ್ಯವಸ್ಥೆಯ ವಿರುದ್ಧವೇ ಅವರು ಬಂಡೆದಿದ್ದರು. ಅದನ್ನ ಒಪ್ಪಿಕೊಳ್ಳೋಣ. ನಮ್ಮಲ್ಲಿ ಯಾಕೆ ಪರಿವರ್ತನೆ ಬರಬಾರ್ದು? ಅಂದು ಅಂಬೇಡ್ಕರ್ ರವರು ಸಿಡಿದೆದ್ದದ್ದು ಛಿಚಿಡಿಜಿಚಿಟ.

***ಇಂದು ಕೂಡ ಕೆಳವರ್ಗದವರ ಧಾರ್ಮಿಕ ಮುಖಂಡರು ಸಮಾಜೋತ್ಸವದಲ್ಲಿ ಪ್ರಮುಖರಾಗಿ ಕಾಣ್ಸೋದಿಲ್ಲ, ವೇದಿಕೆಯ ಮೇಲೆಲ್ಲ ಕಾಣುವವರು ಮೇಲ್ಜಾತಿಯವರ ಸ್ವಾಮೀಜಿಗಳು, ಅಂತ ಆರೋಪ ಇದಿಯಲ್ಲ?***

**ಕರ್ನಾಟಕದ ಒಟ್ಟು ಸಮಾಜೋತ್ಸವಗಳ ವರದಿಗಳನ್ನ ತರಿಸಿ ನೀವೇ ನೋಡಿ. ಆಗ ನಿಮಗೆ ಈ ಆರೋಪದಲ್ಲಿ ಎಷ್ಟು ಸತ್ಯ ಇದೆ ಅಂತ ಗೊತ್ತಾಗ್ತದೆ.**